**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.2151/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ನಾಗಸಿಂಹ ಎಸ್. | ಪ್ರಾಸಾ-2 |
| ತಂದೆಯ ಹೆಸರು | : ವೇಣುಗೋಪಾಲ್ ಎಸ್. | ಚಾಸಾ-9 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವೈದ್ಯಾಧಿಕಾರಿ | ದಿನಾಂಕಃ 20.02.2026. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು ಜೂನ್ 2021 ರಿಂದ ಇಲ್ಲಿಯವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.04.10.2024 ರಂದು ರಾ.10.25 ರ ಸಮಯಕ್ಕೆ ಚಾಸಾ-1 ರವರು ಕಡಿತದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆ ಗೆಂದು ಬಂದಿರುತ್ತಾರೆ. ಅವರನ್ನು ಪರೀಕ್ಷಿಸಲಾಗಿ ಅವರ ಬಲಗೈನ ಮದ್ಯದ ಬೆರಳಿನ ತುದಿಯು ತುಂಡಾಗಿರುವುದು ಕಂಡುಬಂದಿರುತ್ತದೆ. ಸದರಿ ಗಾಯವು ತೀರ್ವ ಸ್ವರೂಪದ್ದಾಗಿರುತ್ತದೆ.

ಸಾಕ್ಷಿಯು ದಿ.14.10.2024 ರಂದು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಚಾಸಾ-1 ರವರಿಗೆ ಆಗಿರುವಂತಹ ಗಾಯಗಳು ತೋಟದಲ್ಲಿ ಕೆಲಸ ಮಾಡುವ ಸಮಯದಲ್ಲಿ ಚಾಕು ತಗುಲಿ ಆಗುವ ಸಂಭವವಿರುತ್ತದೆ ಎಂದರೆ ಸರಿ. ಚಾಸಾ-1 ರವರಿಗೆ ಆಗಿರುವ ಗಾಯವು ಹಲ್ಲೆಯಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.